ಬಗ್ಗೆ ಯೋಚಿಸಿದರು. ತಮಗೆ ಉದ್ಯಮದ ಮಾರ್ಗವಾಗಲಿದ್ದ ಮೋಂಬತ್ತಿ ಕಲಿಕೆಯ ಬಾಗಿಲು ಮುಚ್ಚಿದೆ. ಹಾಗೆಂದು ಬರಿಗೈಯಲ್ಲಿ ಮಹಾಬಲೇಶ್ವರಕ್ಕೆ ಹಿಂತಿರುಗಲು ಸಾಧ್ಯವಿರಲಿಲ್ಲ. ತಂದೆಗೆ ಏನೆಂದು ಹೇಳುವುದು? 'ತಾನು ಎನ್.ಎ.ಬಿ.ಗೆ ಹೋಗಿ ಏನಾದರೂ ಕಲಿತು ಬರುತ್ತೇನೆ' ಎಂದು ಅಪ್ಪನಲ್ಲಿ ಆತ್ಮವಿಶ್ವಾಸದಿಂದ ಹೇಳಿ ಬಂದಿದ್ದರು. ಈಗ ಎದುರಿಗಿದ್ದ ಅವಕಾಶ ಮಾಲೀಶು ಮಾಡುವುದು ಮಾತ್ರ. ಮತ್ತೆಲ್ಲ ಬಾಗಿಲುಗಳು ಅವರಿಗೆ ಸದ್ಯಕ್ಕೆ ಮುಚ್ಚಿತ್ತು. ಇದನ್ನೂ ಕಲಿಯದೆ ಹಿಂತಿರುಗಿದರೆ ಯಾವ ಮುಖವಿಟ್ಟು ತಂದೆಯಲ್ಲಿ ಹೋಗುವುದಿತ್ತು? ಮಾಲೀಶು ಮಾಡುವುದು ಭಾವೇಶ್ ಅವರ ಜೀವನದ ಗುರಿಯಾಗಿರಲಿಲ್ಲ. ಆದರೂ ಸದ್ಯದ ಪರಿಸ್ಥಿತಿಯಲ್ಲಿ ತೆರೆದೊಂದು ಹಾದಿಯಲ್ಲಿ ನಡೆದು ಮಾಲೀಶು ಕಲಿಯಲು ನಿರ್ಧರಿಸಿದರು.

ಅದೇ ದಿನ, ಪುನರ್ವಾಸ ಕೇಂದ್ರದಲ್ಲಿ ಅವರು ಮೊದಲ ಬಾರಿಗೆ ದಿನುಭಾಯಿ ಗಾಂಧಿ ಅವರನ್ನು ಭೇಟಿಯಾದರು. ಅವರು 'ಎನ್.ಎ.ಬಿ. ಇಂಡಿಯಾ'ದ ಗೌರವ ಕಾರ್ಯದರ್ಶಿಗಳಾಗಿದ್ದರು. ಅವರು ಭಾವೇಶ್ ಅವರ ಬೆನ್ನು ತಟ್ಟಿ 'ಮನಸ್ಸಿಟ್ಟು ಕಲಿ. ನೀನು ಅವಶ್ಯವಾಗಿ ಜೀವನದಲ್ಲಿ ಮುನ್ನಡೆಯುವೆ' ಎಂದರು. ಕನಸಿನ ಹಾದಿ ನೇರವಿರಲಿಲ್ಲ. ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯುವುದು ಹೇಗೆ? ಬದುಕು ತಮಗೇನು ಕಾದಿರಿಸಿದೆ ಎನ್ನುವುದರ ಬಗ್ಗೆ ಭಾವೇಶ್ ಕೂಡಾ ಕುತೂಹಲಿಗರಾಗಿದ್ದರು. ಭಾವೇಶ್ ಸದ್ಯಕ್ಕೆ ಹೊಸ ಆಸೆಯನ್ನು ಹೊತ್ತು ಕೇಂದ್ರದಲ್ಲಿ ತರಪೇತು ಪಡೆಯಲು ಉಳಿದರು.

ತರಪೇತಿಯ ಮೊದಲ ದಿನ, ಅಡುಗೆ ಕೋಣೆ ಎಲ್ಲಿದೆ, ಮುಖ ಕೈ ಕಾಲು ತೊಳೆಯುವ ಜಾಗ ಯಾವುದು, ಸ್ನಾನಗೃಹ ಎಲ್ಲಿದೆ, ಭೋಜನಶಾಲೆ ಎಲ್ಲಿದೆ ಎಂದೆಲ್ಲ ಪರಿಚಯ ಮಾಡಿಸಿಕೊಟ್ಟರು. ಹಾಗೆಯೇ ಅಲ್ಲಿದ್ದ ವಿವಿಧ ಶಿಕ್ಷಕರನ್ನು ಪರಿಚಯಿಸಿದರು. ಭಾವೇಶ್ ಅವರ ಮನಸ್ಸಿನಲ್ಲಿ ನೂರು ಪ್ರಶ್ನೆಗಳಿದ್ದವು, ಜಿಜ್ಞಾಸೆಗಳಿದ್ದವು. ಅವರಂತೆಯೇ ಬಹಳಷ್ಟು ದೃಷ್ಟಿಹೀನರು ತರಪೇತು ಪಡೆಯಲು ಬಂದಿದ್ದರು. ಮಹಾರಾಷ್ಟ್ರದ ಚಂದ್ರಪುರ್‌ನಿಂದ ಶಶಿ ಚೌರೆ ಇದ್ದರು. ಅವರ ತಂದೆ ಅಲಹಾಬಾದ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು. ಗೋವಿಂದ್ ಎಂಬುವವರು ಠಾಣೆ ನಗರದಿಂದ ಬಂದಿದ್ದರು, ಬಹಳ ಒಳ್ಳೆಯ ವಾಗ್ಮಿಯಾಗಿದ್ದರು. ಔರಂಗಾಬಾದ್‌ನಿಂದ ಬಂದ ಲಕ್ಷ್ಮಣ ಪಾಂಡೆಗೆ ಓದುಬರಹ ಗೊತ್ತಿರಲಿಲ್ಲ. ಆದರೆ ಇಂಗ್ಲಿಷ್ ಚೆನ್ನಾಗಿ ಮಾತನಾಡುತ್ತಿದ್ದರು. ಆತನ ಸ್ಮರಣ ಶಕ್ತಿಯಂತೂ ಕಂಪ್ಯೂಟರ್‌ನಂತಿತ್ತು. ಎಲ್ಲವನ್ನೂ ಆತ ನೆನಪಿನಲ್ಲಿ ಇಟ್ಟುಕೊಳ್ಳಬಲ್ಲ. ಕೊಂಕಣದಿಂದಲೂ ಸಾಕಷ್ಟು ಜನ ಬಂದಿದ್ದರು. ಅದಲ್ಲದೆ ಅವರ ಬ್ಯಾಚಿನಲ್ಲಿ ಮುಂಬಯಿಯವರೇ ಆದ 20 ಜನ ಇದ್ದರು. ಅವರಿಗೆ ಹಾಸ್ಟೆಲ್ ಅನುಕೂಲ ಒದಗಿಸಿರಲಿಲ್ಲ. ಅವರು ಪ್ರತಿ ದಿನ ಮನೆಯಿಂದ ಸಂಸ್ಥೆಗೆ ಬಂದುಹೋಗಿ ಮಾಡುತ್ತಿದ್ದರು.

ಇವರೆಲ್ಲರಿಗೂ ಮೊದಲ 15 ದಿನ ಸಾಮಾನ್ಯ ತರಪೇತಿ ನೀಡಿದರು. ಅವರಿಗೆ ಬ್ರೈಲ್ ಲಿಪಿ ಕಲಿಸಿದರು. ಸ್ವತಂತ್ರವಾಗಿ ನಡೆದಾಡುವ ತರಪೇತಿ ನೀಡಿದರು. ಸಂಸ್ಥೆಯಿಂದ ಹೊರಟು ಮಹಾಲಕ್ಷ್ಮಿ ನಿಲ್ದಾಣದವರೆಗೆ ಬಿಳಿಯ ಬೆತ್ತದ ಸಹಾಯದಿಂದ ನಡೆದು ಹೋಗುವ 'ಮೊಬಿಲಿಟಿ' ತರಪೇತು ನೀಡಲಾಯಿತು. ದಿಕ್ಕನ್ನು ಅರಿಯುವ ಓರಿಯೆಂಟೇಷನ್ ತರಗತಿಗಳಲ್ಲಿ, ವಾಸನೆಯಿಂದಲೇ ಪೆಟ್ರೋಲ್ ಪಂಪ್ ಎಲ್ಲಿದೆ, ಹೋಟೆಲ್ ಎಲ್ಲಿದೆ, ದನಿ ಅಥವಾ ಶಬ್ದ ಬಂದ ಕಡೆಯಿಂದ ದಿಕ್ಕನ್ನು ಗುರುತಿಸುವುದು ಹೇಗೆ ಮುಂತಾದ ತರಪೇತು ದೊರೆಯಿತು. ಈ ಮೂಲಕ ಅವರನ್ನು ಆದಷ್ಟು ಸ್ವತಂತ್ರರನ್ನಾಗಿ ಮಾಡಲು ಯತ್ನಿಸುತ್ತಿದ್ದರು. ಅಂಧರು ಸ್ವತಃ ಏಕಾಂಗಿಗಳಾಗಿ ಜಗತ್ತು ಸುತ್ತಿ ಬರಲು ಸಾಧ್ಯವಾಗಲಿತ್ತು. ಇದರೊಡನೆ ರೂಪಾಯಿಗಳ ನೋಟುಗಳನ್ನು, ನಾಣ್ಯಗಳನ್ನು ಗುರುತಿಸುವುದು ಮುಂತಾದ ದೈನಂದಿನ ಜೀವನಕ್ಕೆ ಅಗತ್ಯವಾದ ಕೌಶಲಗಳನ್ನು ಕಲಿಸಿದರು. ಇಷ್ಟು ವರ್ಷಗಳಲ್ಲಿ ಭಾವೇಶ್ ಅವರಿಗೆ ತಿಳಿದಿರದ ಎಷ್ಟೋ ವಿಷಯಗಳು ಈ ತರಪೇತಿನ ಮೂಲಕ ಅವರಿಗೆ ಕಲಿಯಲು ಸಾಧ್ಯವಾಯಿತು. ಇವೆಲ್ಲ ಆದ ಮೇಲೆ ವಿಶೇಷ ತರಪೇತಿಗೆ ಅವರು ತಯಾರಾದರು.

ಆ ಪುನರ್ವಸತಿ ಕೇಂದ್ರದಲ್ಲಿ ಓರ್ವ ಮೌಸಿ ಎಂದು ಕರೆದ ಹಿರಿಯ ಮಹಿಳೆ, ಎಲ್ಲರಿಗೆ ಅಡುಗೆ ಮಾಡಿ ಬಡಿಸುತ್ತಿದ್ದಳು. ಬಾಲ್ಯದಿಂದಲೇ ಅಮ್ಮನಿಗೆ ಅಡುಗೆ ಮನೆಯಲ್ಲಿ ಸಹಾಯ ಮಾಡುವುದು ಭಾವೇಶ್‌ಗೆ ರೂಢಿಯಾಗಿತ್ತು. ಅದೇ ರೀತಿ ಇಲ್ಲಿ ಮೌಸಿಗೆ ಅಡುಗೆ ಮನೆಯಲ್ಲಿ ಸಹಾಯ ಮಾಡತೊಡಗಿದರು. ಇದರ ಲಾಭ, ಇವರಿಗೆ ಎರಡು ಬಾರಿ ಹೆಚ್ಚಿನ ಚಹಾ ಸಿಗತೊಡಗಿತು. ಉಳಿದವರೆಲ್ಲ ತರಪೇತು ಮುಗಿದೊಡನೆ ಮಜಾ ಮಾಡುತ್ತಾ ಸಮಯ ಕಳೆದರೆ, ಬಿಡುವಿನ ಈ ವೇಳೆಯನ್ನು ಭಾವೇಶ್ ಅಡುಗೆ ಮನೆಯಲ್ಲಿ ಕಳೆಯುವರು. ಚಪಾತಿಗೆ ಹಿಟ್ಟು ನಾದುವುದು, ತರಕಾರಿ ಹೆಚ್ಚುವುದು, ಪಾತ್ರೆ ತೊಳೆಯುವುದು ಇತರ ಕೆಲಸಗಳಲ್ಲಿ ತೊಡಗುತ್ತಿದ್ದರು. ತಮ್ಮ ಸಮಯ ಇತರರಿಗೆ ಸಹಾಯವಾಗಬೇಕು, ಇಲ್ಲ ತನ್ನ ಕಲಿಕೆಗೆ ನೆರವಾಗಬೇಕು ಎಂಬುದು ಭಾವೇಶ್ ಅವರ ಸ್ವಾಭಾವಿಕ ಗುಣವಾಗಿತ್ತು. ಅವರ ಈ ಗುಣವೇ ಇಲ್ಲಿ ಸ್ನೇಹ ಸಂಬಂಧಗಳನ್ನು ಕೂಡಿಸಲಿತ್ತು, ಮುಚ್ಚಿದ ಅವಕಾಶದ ಬಾಗಿಲನ್ನೂ ತಟ್ಟಿ ತೆರೆಸಲಿದ್ದಿತು.

ಪ್ರತಿವಾರ ಮೌಸಿ ಬ್ರೆಡ್‌ನಿಂದ ಉಪ್ಪಿಟ್ಟು ಮಾಡುತ್ತಿದ್ದರು. ಉಪ್ಪಿಟ್ಟು ಮಾಡುವ ಹಿಂದಿನ ದಿನ ಮೌಸಿ ಕ್ಯಾಷಿಯರ್‌ನಿಂದ ಬ್ರೆಡ್ಡಿಗೆ ಹಣ ತೆಗೆದುಕೊಳ್ಳುತ್ತಿದ್ದರು. ಕಿಂಗ್ ಜಾರ್ಜ್ ಆಸ್ಪತ್ರೆಯ ಹೊರಗೆ ಫೇಮಸ್ ಸ್ಟುಡಿಯೋಗೆ ಎಲ್ಲರೂ ಎಡಕ್ಕೆ ತಿರುಗುತ್ತಾರೆ. ಅಲ್ಲಿ ಒಂದು ದೊಡ್ಡ ಪಾದಚಾರಿಗಳ ರಸ್ತೆ ಇತ್ತು. ಅಲ್ಲಿ ಬೀದಿ ಬದಿಯ ತಿನಿಸಿನ ಬಹಳಷ್ಟು ಅಂಗಡಿಗಳು ಇದ್ದವು. ಸಂಸ್ಥೆಗೆ ಸೇರಿದ್ದ ಬಹಳಷ್ಟು ಅರೆಕುರುಡರಾದ ಮಿತ್ರರು, ಹಣ ಇದ್ದವರು, ಅಲ್ಲಿ ಹೋಗಿ ಆಗಾಗ್ಗೆ ತಿಂಡಿ ತಿನ್ನುತ್ತಿದ್ದರು. ಒಂದು ದಿನ ಅವರು ಅಲ್ಲಿಯ ಸ್ಯಾಂಡ್‌ವಿಚ್ ಅಂಗಡಿಯ ಬಳಿ ಮೌಸಿ ನಿಂತಿರುವುದನ್ನು ನೋಡಿದರು. ಅಲ್ಲಿ ಸ್ಯಾಂಡ್‌ವಿಚ್ ತಯಾರಿಸುವ ಸಮಯದಲ್ಲಿ, ಬ್ರೆಡ್ಡಿನ ಅಂಚುಗಳನ್ನು ಕತ್ತರಿಸಿ ಬೇರ್ಪಡಿಸುತ್ತಾರೆ. ಆ ಬೇರ್ಪಡಿಸಿದ ತುಂಡುಗಳನ್ನು ಮೌಸಿ ಒಂದು ಚೀಲದಲ್ಲಿ ತುಂಬಿಕೊಂಡು ಹೊರಟಿದ್ದಳು. ಈಗ ಈ ಮಿತ್ರರಿಗೆ ಬ್ರೆಡ್ ಉಪ್ಪಿಟ್ಟು ಈ ತುಂಡುಗಳಿಂದಲೇ ತಯಾರಾಗುತ್ತಿದೆ ಎಂದು ಅರ್ಥವಾಗಿ ಬಿಟ್ಟಿತು. ಮೌಸಿ ಕ್ಯಾಷಿಯರ್‌ನಿಂದ ಬ್ರೆಡ್ಡಿಗೆ ದುಡ್ಡೇನೋ ತೆಗೆದುಕೊಳ್ಳುತ್ತಿದ್ದಳು. ಆದರೆ ಇಲ್ಲಿ ತಿಂಡಿ ಅಂಗಡಿಯವ ಕತ್ತರಿಸಿ ಎಸೆಯುವ ಚೂರುಗಳು ಪುಕ್ಕಟೆಯಾಗಿ ಆಕೆಗೆ ಸಿಗುತ್ತಿದ್ದವು. ಇವೆಲ್ಲವೂ ಗೊತ್ತಾದ ಮೇಲೂ ಆ ಉಪ್ಪಿಟ್ಟಿನ ರುಚಿಯೇನೂ ಕಡಮೆ ಆಗಲಿಲ್ಲ!

ಅಧ್ಯಾಯ 7

## ತಳ್ಳುಗಾಡಿಯ ಏರು ಹಾದಿ

ದಿನಗಳು ಕಳೆದವು. ತರಪೇತಿಯಲ್ಲಿ ಕಲಿಸಿದ್ದನ್ನು ಭಾವೇಶ್ ಮನಸ್ಸಿಟ್ಟು ಕಲಿಯತೊಡಗಿದರು. ಇದು ತಮ್ಮ ಗುರಿಯಾಗಿರಲಿಲ್ಲ, ಮಾಲೀಶು ಮಾಡುವುದು ತಾವು ಕಲಿಯಲು ಬಂದ ಕೌಶಲವಲ್ಲ. ಆದರೆ ಕಲಿಯುವ ಯಾವುದನ್ನೂ ಪೂರ್ಣ ಶ್ರದ್ಧೆ ಮತ್ತು ಪರಿಶ್ರಮದಲ್ಲಿ ಕಲಿಯುವುದು ಭಾವೇಶ್ ಅವರ ನಿರ್ಣಯವಾಗಿತ್ತು. ಪೂರ್ಣ ಅಂಧರ ತರಪೇತಿ ಬೇರೆ ಇತ್ತು. ಅರೆಕುರುಡರ ತರಪೇತಿ ಬೇರೆ ಇತ್ತು. ಈ ಎರಡು ತಂಡಗಳ ಬದುಕಿನ ಗುರಿಗಳು ಇಲ್ಲಿ ಬೇರೆಯಾಗಿದ್ದವು. ಆದರೆ ಪ್ರತಿ ಬುಧವಾರ ಮತ್ತು ಶನಿವಾರ ಎಲ್ಲರನ್ನೂ ಒಟ್ಟಿಗೇ ಕೂಡಿಸುವರು. ಆ ದಿನಗಳು ಅತಿಥಿ ಪ್ರವಚನ ಇರುತ್ತಿತ್ತು. ಯಾರಾದರೂ ಸಾಧಕರನ್ನು, ಪ್ರಸಿದ್ಧರನ್ನು ಆಮಂತ್ರಿಸುತ್ತಿದ್ದರು. ಈ ಪ್ರವಚನಗಳು ಭಾವೇಶ್‌ಗೆ ಬಹಳ ಹಿಡಿಸುತ್ತಿದ್ದವು. ಕಾರಣ ಭಾವೇಶ್ ಈ ಸಮಯದಲ್ಲಿ ಒಂದಿಷ್ಟು ಖಿನ್ನರಾಗಿದ್ದರು. ಅವರ ಆತ್ಮವಿಶ್ವಾಸ ಕುಗ್ಗಿತ್ತು. ಇಂತಹ ಸಮಯದಲ್ಲಿ ಈ ಅತಿಥಿಗಳು ಬಂದು ತಮ್ಮ ಬದುಕಿನ ಪಯಣವನ್ನು ತೆರೆದಿಡುತ್ತಿದ್ದರು. ತಮ್ಮ ಜೀವನದಲ್ಲಿ ಎಂತೆಂತಹ ಸಮಸ್ಯೆಗಳನ್ನು ಎದುರಿಸಿ, ಇಂದು ಬದುಕಿನ ಈ ತಾಣವನ್ನು ತಾವು ಬಂದು ತಲುಪಿದ್ದೇವೆ ಎಂದು ತಿಳಿಸುತ್ತಿದ್ದರು. ಅವರ ಇಂದಿನ ಯಶಸ್ಸಿನ ಹಿಂದಿರುವ ಪರಿಶ್ರಮ–ಹೋರಾಟ ಭಾವೇಶ್ ಅವರಿಗೆ ಬಹಳಷ್ಟು ಸ್ಫೂರ್ತಿ ನೀಡುತ್ತಿತ್ತು. ಇದಲ್ಲದೆ, ದ್ರವ ರೂಪದ ಸೋಪು ತಯಾರಿಸುವವರು, ಇನ್ಯಾರೋ ಅಗರಬತ್ತಿ ತಯಾರಿಸುವವರು, ಮತ್ಯಾರೋ ಸಿ.ಎ., ಎಂ.ಬಿ.ಎ ಮಾಡಿದವರು ಕೂಡಾ ಅಲ್ಲಿಗೆ ಬಂದು ಇವರೊಡನೆ ಮಾತನಾಡುತ್ತಿದ್ದರು. ಬೆಂಗಳೂರಿನಿಂದ ಬಂದ ಹರಿ ರಾಘವನ್ ಅವರು ಭಾವೇಶ್ ಅವರಿಗೆ ಒಳ್ಳೆಯ ಮಿತ್ರರಾದರು. ಅವರು ಎಂ.ಬಿ.ಎ. ಮಾಡಿ ಮುಂಬಯಿಯ ಒಂದು ಕಂಪನಿಯಲ್ಲಿ ಮಾರ್ಕೆಟಿಂಗ್ ನೋಡಿಕೊಳ್ಳುತ್ತಿದ್ದರು. ಅವರು ಪ್ರತಿ ಭಾನುವಾರ ಬೆಳಗ್ಗೆ 'ಮಾರ್ಕೆಟಿಂಗ್' ಕಲಿಸಲೆಂದೇ ಬರುತ್ತಿದ್ದರು.

(ಸಶೇಷ)